ಕೋಮುಲ್ ಚುನಾವಣೆ ಪಾರದರ್ಶಕವಾಗಿರಲು ಕ್ರಮವಹಿಸಿ

5 ವರ್ಷದ ಸೇವೆಗೆ ಸದಸ್ಯತ್ವ

ಕೋಲಾರ: ಕೋಲಾರ ಹಾಲು ಒಕ್ಕೂಟದ ಚುನಾವಣೆ ನಿಷ್ಪಕ್ಷಪಾತ ಹಾಗೂ ಪಾರದರ್ಶಕವಾಗಿ ನಡೆಯಬೇಕಾದರೆ ಹತ್ತಾರು ವರ್ಷಗಳಿಂದ ಒಕ್ಕೂಟದಲ್ಲಿರುವ ಅಧಿಕಾರಿಗಳನ್ನು ಕೂಡಲೇ ಬೇರೆಡೆ ವರ್ಗಾವಣೆ ಮಾಡಿ ನಿರ್ದೇಶಕರ ಸ್ಥಾನಕ್ಕೆ ಸ್ಪರ್ಧಿಸುವ ಆಕಾಂಕ್ಷಿಗಳು ಕಡ್ಡಾಯವಾಗಿ 5 ವರ್ಷ ಸ್ಥಳೀಯವಾಗಿ ಹಾಲೂ ಉತ್ಪಾದಕರ ಸಂಘದಲ್ಲಿ ಸದಸ್ಯತ್ವ ಪಡೆದಿರಬೇಕೆಂಬ ಕಾನೂನು ಜಾರಿ ಮಾಡಬೇಕೆಂದು ರೈತ ಸಂಘದ ರಾಜ್ಯ ಉಪಾಧ್ಯಕ್ಷ ಕೆ.ನಾರಾಯಣಗೌಡ ಪತ್ರಿಕಾ ಹೇಳಿಕೆ ಮೂಲಕ ಆಗ್ರಹಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ರವರು ಲಕ್ಷಾಂತರ ರೈತ ಕುಟುಂಬಗಳ ಜೀವನಾಡಿಯಾಗಿ ಸ್ವಾಭಿಮಾನದ ಬದುಕನ್ನು ಕಲ್ಪಿಸಿರುವ ಹಾಲು ಒಕ್ಕೂಟದಲ್ಲಿ ದಿನೇ ದಿನೇ ರಾಜಕೀಯ ವ್ಯಕ್ತಿಗಳ ಆರೋಪ ಪ್ರತ್ಯಾರೋಪ ಬಹಿರಂಗವಾಗುತ್ತಿದ್ದು, ಇದರಿಂದ ಹಾಲು ಒಕ್ಕೂಟ ಮುಚ್ಚಿ ಹೋಗುವ ಭೀತಿಯಲ್ಲಿರುವ ಕೋಲಾರ ಜಿಲ್ಲೆಯ ಹೈನೋದ್ಯಮದ ಉಳಿವಿಗಾಗಿ ಒಕ್ಕೂಟದಲ್ಲಿನ ಭ್ರಷ್ಟಾಚಾರ ನಿರ್ಮೂಲನೆಗೆ ಇಲ್ಲಿ ಹತ್ತಾರು ವರ್ಷಗಳಿಂದ ಬೇರು ಬಿಟ್ಟಿರುವ ವ್ಯವಸ್ಥಾಪಕರಿಂದ ಹಿಡಿದು ಎಲ್ಲಾ ಅಧಿಕಾರಿಗಳನ್ನು ಎತ್ತಂಗಡಿ ಮಾಡಬೇಕು ಎಂದು ಒತ್ತಾಯಿಸಿದ್ದಾರೆ.

ಹಸುಗಳಲ್ಲಿ ಎಷ್ಟು ತಳಿ ಇದೆ ಎಂದು ತಿಳಿದಿರುವುದಿಲ್ಲ. ಒಂದು ಲೀಟರ್ ಹಾಲು ಉತ್ಪಾದನೆಗೆ ಎಷ್ಟು ವೆಚ್ಚ ಆಗುತ್ತದೆ ಎಂಬ ಅರಿವು ಇರುವುದಿಲ್ಲ, ಹೈನೋದ್ಯಮದ ಗಂಧ,ಗಾಳಿ ಅರಿಯದವರು ಒಕ್ಕೂಟದಲ್ಲಿನ ಆದಾಯ ನುಂಗಲು ಬರುವ ರಾಜಕಾರಣಿಗಳಿಗೆ ಅವಕಾಶ ಕಲ್ಪಿಸುತ್ತಿರುವುದು ದುರಂತ ಎಂದು ತಿಳಿಸಿದ್ದಾರೆ. ಜಿಲ್ಲಾಧ್ಯಕ್ಷ ಈಕಂಬಳ್ಳಿ ಮಂಜುನಾಥ ಮಾತನಾಡಿ, ಹಾಲು ಒಕ್ಕೂಟ ರಾಜಕೀಯ ವ್ಯಕ್ತಿಗಳ ತವರು ಮನೆಯಾಗಿದೆ. ಒಂದು ಕಡೆ ನಂಜೇಗೌಡರಿಗೆ ಅತ್ತೆ ಮನೆಯಾದರೆ ಬಂಗಾರಪೇಟೆ ಶಾಸಕರಾದ ಎಸ್.ಎನ್.ನಾರಾಯಣಸ್ವಾಮಿ ರವರಿಗೆ ತವರು ಮನೆಯಾಗಿ ಸಾವಿರಾರು ಹಸುಗಳನ್ನು ಕಟ್ಟಿ, ಕಷ್ಟ ಪಟ್ಟು ಹಾಲು ಹಾಕಿದ ರೈತರಿಗೆ ವಂಚನೆ ಮಾಡಲು ಈ ನಾಯಕರು ತಾಮುಂದು ತಾಮುಂದು ಎಂದು ನಿಂತಿದ್ದಾರೆ ಎಂದು ಲೇವಡಿ ಮಾಡಿದ್ದಾರೆ. ಒಕ್ಕೂಟದ ನಿರ್ದೇಶಕರ ಸ್ಥಾನಕ್ಕೆ ಸ್ಪರ್ಧಿಸಬೇಕಾದರೆ ಕಡ್ಡಾಯವಾಗಿ ಆ ಕ್ಷೇತ್ರದಲ್ಲಿ 5 ವರ್ಷ ಹಾಲು ಉತ್ಪಾದಕರ ಸಂಘಕ್ಕೆ ಹಾಲು ವಿತರಣೆ ಮಾಡಿ ಸದಸ್ಯತ್ವ ಪಡೆದಿರಬೇಕು. ಚುನಾವಣೆಗೆ ಮಾತ್ರ ಸದಸ್ಯತ್ವ ಪಡೆದು ಚುನಾವಣೆಗೆ ನಿಲ್ಲುವ ನಿರ್ದೇಶಕರ ನಾಮಪತ್ರ ತಿರಸ್ಕರಿಸಲು ಮನವಿ ಮಾಡಿದರು. ಪತ್ರಿಕಾ ಹೇಳಿಕೆ ನೀಡುವಾಗ ರಾಜ್ಯ ಮುಖಂಡ ಬಂಗವಾರಿ ನಾಗರಾಜಗೌಡ, ಮಂಗಸಂದ್ರ ತಿಮ್ಮಣ್ಣ, ರಾಜೇಂದ್ರ ಗೌಡ ಮುಂತಾದರು ಇದ್ದರು.

> **ಒಕ್ಕೂಟ ಉಳಿಯಬೇಕಾದರೆ ಹಸುಗಳ ಮೇಲೆ ಲಕ್ಷಾಂತರ ರೂಪಾಯಿ ಬಂಡವಾಳ ಹಾಕಿ ಬೇಸಿಗೆ ಮಳೆಗಾಲದಲ್ಲಿ ಮೇವು ನೀರು ಒದಗಿಸಿ ಬೆಲೆ ಇಳಿಕೆಯಾದಾಗ ಸಾಲ ಮಾಡಿ ಹಸು ಸಾಕಾಣಿಕೆ ಮಾಡಿ ಲಾಭ ಇಲ್ಲದಿದ್ದರೂ ಸಗಣಿ ಗಂಜಲಕ್ಕೆ ತನ್ನ ಜೀವನವನ್ನೇ ಹೈನೋದ್ಯಮಕ್ಕೆ ಮುಡಿಪಾಗಿಟ್ಟ ರೈತರು ಆಯ್ಕೆಯಾಗಬೇಕು.**
> ■ **ಕೆ.ನಾರಾಯಣಗೌಡ, ಉಪಾಧ್ಯಕ್ಷ**

ಓದುಗ–ಕೇಳುಗ ಕಾರ್ಯಕ್ರಮದಲ್ಲಿ ರೋಜಾ ಪುಸ್ತಕ ಬಿಡುಗಡೆ

ಮಹಿಳಾ ಕೇಂದ್ರಿತ ಕಾದಂಬರಿ ರೋಜಾ

ಕೋಲಾರ: ಬಿಳುಮನೆ ರಾಮದಾಸ್‌ರ ರೋಜಾ ಪುಸ್ತಕ ಕಾದಂಬರಿಯು ಪುರುಷರ ದೃಷ್ಟಿ ಕೋನದ ಮಹಿಳಾ ಕೇಂದ್ರಿತ ಕಾದಂಬರಿಯಾಗಿದೆ ಎಂದು ಚೆನ್ನಪಟ್ಟಣದ ಉಪನ್ಯಾಸಕರು ಹಾಗೂ ಚಿಂತಕ ಡಾ.ಡಿ.ಆರ್.ದೇವರಾಜ ಅಭಿಪ್ರಾಯಪಟ್ಟರು.

ನಗರದ ಪತ್ರಕರ್ತರ ಭವನದಲ್ಲಿ ಭಾನುವಾರ ಓದುಗ–ಕೇಳುಗ ನಮ್ಮ ನಡೆ 48 ನೇ ಕಾರ್ಯಕ್ರಮದಲ್ಲಿ ಬಿಳುಮನೆ ರಾಮದಾಸರ ರೋಜಾ ಪುಸ್ತಕ ಕಾದಂಬರಿ ಕುರಿತು ಅವರು ಉಪನ್ಯಾಸ ನೀಡುತ್ತಿದ್ದರು.

ಕುವೆಂಪು ಅವರ ಕಾನೂರು ಹೆಗ್ಗಡತಿ ಮತ್ತು ಮಲೆಗಳಲ್ಲಿ ಮದುಮಗಳು ಕಾದಂಬರಿಗಳಂತೆಯೇ ಮಲೆನಾಡಿನ ಕುರಿತು ಮಾಹಿತಿ ನೀಡುವ ಕೃತಿ ಇದಾಗಿದ್ದು, ರೋಜಾ ಪುಸ್ತಕವು ಮಹಿಳಾ ಕೇಂದ್ರಿತವಾಗಿದ್ದರೂ ಅದು ಪುರುಷರ ದೃಷ್ಟಿಕೋನವನ್ನು ಹೊಂದಿದೆ. ಮಹಿಳೆಯರು ನೈತಿಕ ಮಾರ್ಗದಲ್ಲಿ ನಡೆದಾಗ ಮಾತ್ರವೇ ಔನತ್ಯಕ್ಕೇರಲು ಸಾಧ್ಯ ವಾಗುತ್ತದೆ, ಅನೈತಿಕ ಮಾರ್ಗ ಹಿಡಿದರೆ ಅವನತಿ ಹಿಡಿಯಬೇಕಾಗುತ್ತದೆ ಎಂಬುದನ್ನು ಪ್ರತಿಪಾದಿಸುತ್ತದೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕವಿ ನಾಟಕಕಾರ ಹಾಗೂ ಭಾಷೆ ಮತ್ತು ಸಾಹಿತ್ಯ ಕಲೆ, ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ, ಬೆಂಗಳೂರು ನಿರ್ದೇಶಕ ಡಾ.ಕೆ.ವೈ.ನಾರಾಯಣಸ್ವಾಮಿ ವಹಿಸಿದ್ದು. ಇಜಂ ಗಳ ಲಕ್ಷಣಗಳನ್ನು ಗುರ್ತಿಸಿ ಹೇಳುವುದಾಗಿದೆ. ಗಾಂಧೀಜಿ,ಅಂಬೇಡ್ಕರ್ ಇಜಂ ,ಮಾರ್ಕಿಜಂ ಮುಂತಾದವು ಗಾಂಧಿ ಎಂದರೆ ಶಾಂತಿ,ಅಹಿಂಸೆಯಾದರೆ ಅಂಬೇಡ್ಕರ್ ಎಂದಾಗ ಶಿಕ್ಷಣ ಎಂಬ ಗುರುತುಗಳ ಮೂಲಕ ನೋಡುವುದಾಗಿದೆ ಎಂದರು. ಇಜಂ ಇಲ್ಲದ ಯಾವ ಕಾದಂಬರಿಕಾರರೂ ಇಲ್ಲ,ಮನುಷ್ಯರೂ ಇಲ್ಲ,ಸಾಹಿತ್ಯದ ಸಂಬಂಧಗಳು ಪೆಡಸಾಗಿದೆ. ಎಡ,ಬಲ ಅಲ್ಲದೆ ಮಧ್ಯಮ ಎಂಬುದು ಸಹ ಇಜಂ. ಎಸ್.ಎಲ್.ಭೈರಪ್ಪನವರು ಅವರ ಇಜಂಗಳಲ್ಲಿ ಬರೆಯುತ್ತಿರುತ್ತಾರೆ ಅದು ಅವರ ನಿಲುವುಗಳಷ್ಟೆ. ನಿಲುವುಗಳಿಲ್ಲದೆ ಬದುಕುವುದು ಬಹಳ ಕಷ್ಟ. ಲೋಹಿಯಾ ಮತ್ತು ಮಾರ್ಕ್ಸವಾದಗಳೆ ದಲಿತ ಸಂಘರ್ಷ ಸಮಿತಿಯಾಗಿ ರೂಪುಗೊಂಡಿದೆ. ಇಜಂ ಎಂಬುದು ಸೃಜನಶೀಲವಾದದ್ದು. ಯಾವುದೇ ಬರವಣಿಗೆಯಲ್ಲಿ ಇಜಂ ಇದ್ದೆ ಇರುತ್ತದೆ. ಜನಪದ,ಪಂಪನಿಂದ ದೇವನೂರುವರೆಗೂ ಇಜಂ ಇದೆ. ಮಹಿಳಾ ಹೋರಾಟಗಳಿಗೆ ಆಹಾರ ಕೊಟ್ಟ ಪುರುಷರು ಮಹಿಳೆಯರನ್ನು ಟ್ರ್ಯಾಪ್ ಮಾಡಿದರು ಎನಿಸುತ್ತದೆ. ಕೋಲಾರದ ಓದುಗ ಕೇಳುಗ ಬಳಗ ನಾಲ್ಕು ವರ್ಷಗಳಿಂದ ಒಂದು ಸಂಸ್ಕೃತಿಯ ನಡೆಯನ್ನು ರೂಪಿರುವುದು ಯುವ ಜನಾಂಗ ಕ್ಕೆ ಮಾದರಿಯಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಜರುಗಿದ ಸಂವಾದ ಕಾರ್ಯಕ್ರಮದಲ್ಲಿ ವಿಶ್ವಕುಂದಾಪುರ ಮಾತನಾಡಿ, ಮಲೆನಾಡಿನ ಸಂಸ್ಕೃತಿ ಕುರಿತು ಕುವೆಂಪು ಕಾದಂಬರಿಗಳು ಚಿತ್ರಿಸಿದ ಹಾಗೆಯೇ ಗಾಂಧಿ ಬಂದ ಕಾದಂಬರಿಯು ಕರಾವಳಿ ಸಂಸ್ಕೃತಿಯನ್ನು ಚಿತ್ರಿಸುತ್ತದೆ ಎಂದರು. ಬಳಗದ ಮುಖ್ಯಸ್ಥರಾದ ಎಚ್.ಎಂ.ಪುರುಷೋತ್ತಮ್ ಮಾತನಾಡಿ, ಕೃತಿಯು ಪುರುಷ ದೃಷ್ಟಿ ಕೋನದ ಮಹಿಳಾ ಕೇಂದ್ರಿದ ಕೃತಿ ಎಂಬುದಕ್ಕೆ ಮತ್ತಷ್ಟು ವಿವರಣೆ ಅಗತ್ಯ ಎಂದರು.

ಸಾಹಿತಿ ಸ.ರಘುನಾಥ್ ಮಾತನಾಡಿ ಯಾವುದೇ ಕೃತಿಯನ್ನು ಲೇಖಕ ಕಾದಂಬರಿಕಾರ ಇದೇ ತತ್ವ ಸಿದ್ಧಾಂತದಲ್ಲಿ ಬರೆಯಬೇಕೆಂಬ ದೃಷ್ಟಿಯಲ್ಲಿ ಬರೆಯುವುದಿಲ್ಲ ಎಂದು ವಿವರಿಸಿದರು.

ಇದಕ್ಕೆ ಲಕ್ಷ್ಮೀಪತಿ ಮಾತನಾಡಿ, ಯಾವುದೇ ಲೇಖಕ ಸಾಹಿತ್ಯ ರಚಿಸುವಾಗ ಆತನ ಜಾತಿ, ಧರ್ಮ ಮತ್ತು ಅನುಭವಗಳ ಆಧಾರದ ಮೇಲೆಯೇ ಬರೆಯಲ್ಪಡುತ್ತದೆ, ಆದ್ದರಿಂದ ಇದು ಪುರುಷ ದೃಷ್ಟಿ ಕೋನದ ಕಾದಂಬರಿ ಎನ್ನಲು ಅಡ್ಡಿಯಿಲ್ಲ ಎಂದರು.

ಸಾಹಿತ್ಯಾಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

> **ಇಡೀ ಕಾದಂಬರಿಯು ಬೆಳ್ಳಮ್ಮ ಹೆಗ್ಗಡತಿ ಕುರಿತಾಗಿದ್ದು, ಮನೆಯ ಪುರುಷರೆಲ್ಲರೂ ಅಕಾಲಿಕ ಮರಣಹೊಂದಿದ ಮೇಲೆ ಮನೆಗೆ ಗೇಣಿದಾರ ಕುಟುಂಬದಿಂದ ಸೊಸೆಯಾಗಿ ಬಂದರೂ ಹೆಗ್ಗಡತಿ ಹಾಗೂ ಅಮ್ಮನ ಪದವಿಗೇರುವ ಬೆಳ್ಳಮ್ಮನ ಕಥೆ ಇದಾಗಿದ್ದರೂ, ಮಲೆನಾಡಿನ ಗೇಣಿದಾರರು, ಜಮೀನುದಾರರು ಹಾಗೂ ಹೆಬ್ಬಾರ್ ಕುಟುಂಬಗಳ ಚಿತ್ರಣ ಇದರಲ್ಲಿದೆ.**
> ■ **ಡಾ.ಡಿ.ಆರ್.ದೇವರಾಜ, ಚಿಂತಕ**

ನಾಳೆ ಬಸವ ಜಯಂತಿ ಅದ್ದೂರಿ ಮಹೋತ್ಸವ

ತಿಪಟೂರು: ತಾಲೂಕಿನ ಹೊನ್ನವಳ್ಳಿ ಹೋಬಳಿಯ ತರಳಬಾಳು ಜಗದ್ಗುರು ಬೃಹನ್ಮಠದ ಹಾಲ್ಕುರಿಕೆ ಗ್ರಾಮದಲ್ಲಿ ಏ.30 ಬುಧವಾರ ಸಂಜೆ 5.30ಗಂಟೆಗೆ ತರಳಬಾಳು ಇಂಟರ್ ನ್ಯಾಷನಲ್ ಶಾಲೆ ಆವರಣದಲ್ಲಿ ಸಿರಿಗೆರೆ ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ದಿವ್ಯ ಸಾನಿಧ್ಯದಲ್ಲಿ ಬಸವ ಜಯಂತಿ 2025 ಮಹೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಾಲೂಕಿನ ಸಾಧು ವೀರಶೈವ ಸಮಾಜ ಅಧ್ಯಕ್ಷ ಪಟ್ರೇಹಳ್ಳಿ ನಂಜುಡಪ್ಪ.ಪಿ.ಬಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಹಾಲ್ಕುರಿಕೆ ತರಳಬಾಳು ಎಂಟರ್ ನ್ಯಾಷನಲ್ ಶಾಲೆಯ ಅಧ್ಯಕ್ಷ ನಾಗರಾಜು ಮಾತನಾಡಿ ಕಾರ್ಯಕ್ರಮಕ್ಕೆ ಕೆರೆಗೋಡಿ ರಂಗಾಪುರ ಮಠದ ಸುಕ್ಷೇತ್ರಾಧ್ಯಕ್ಷರಾದ ಗುರುಪರದೇಶಿಕೇಂದ್ರ ಮಹಾಸ್ವಾಮಿಜಿ ಆಗಮಿಸಲಿದ್ದು, ಉದ್ಘಾಟನೆಯನ್ನು ಗೃಹ ಸಚಿವ ಡಾ.ಜಿ.ಪರಮೇಶ್ವರ್ ನೇರವೇರಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕ ಕೆ.ಷಡಕ್ಷರಿ ಜಿಲ್ಲಾಧಿಕಾರಿ ಶುಭಾಕಲ್ಯಾಣ್, ಉಪವಿಭಾಗಾಧಿಕಾರಿ ಬಿ.ಕೆ. ಸಪ್ತಶ್ರೀ, ಸಿರಿಗೆರೆ ಶ್ರೀಮದ್ ಸದ್ದರ್ಮ ಸಾಧು ವೀರಶೈವ ಅಧ್ಯಕ್ಷ ಎಚ್.ಆರ್.ಬಸವರಾಜಪ್ಪ, ಮಾಜಿ ಶಿಕ್ಷಣ ಸಚಿವ ಬಿ.ಸಿ.ನಾಗೇಶ್, ಮಾಜಿ ಶಾಸಕ ಬಿ.ನಂಜಾಮರಿ ಆಗಮಿಸಲಿದ್ದಾರೆ. ಉಪನ್ಯಾಸವನ್ನು ಸಾಹಿತಿ ಬಿಳಿಗೆರೆ ಕೃಷ್ಣಮೂರ್ತಿ ಹಾಗೂ ಕವಯಿತ್ರಿ ಗೀತಾವಸಂತ ನೀಡಲಿದ್ದಾರೆ.

ಉಪಸ್ಥಿತಿಯಲ್ಲಿ ಸಾಧು ವೀರಶೈವ ಸಮಾಜದ ಚಿಕ್ಕನಾಯಕನಹಳ್ಳಿ ಅಧ್ಯಕ್ಷ ಮರುಳಸಿದ್ದಪ್ಪ.ಕೆ.ಬಿ, ತುರವೇಕೆರೆ ತಾ ಅಧ್ಯಕ್ಷ ಕೆ.ಷಡಕ್ಷರಿ, ಹಾಲ್ಕುರಿಕೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಸೋಮಶೇಖರ್ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಈ ಮಹೋತ್ಸವದಲ್ಲಿ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳ ಅಣ್ಣ ಬಸವಣ್ಣ ಪುಸ್ತಕ ಬಿಡುಗಡೆ ಕಾರ್ಯಕ್ರಮವಿದ್ದು, ಸಂಜೆ ಹಾಲ್ಕುರಿಕೆ ಗ್ರಾಮದ ಮೂಲ ಗದ್ದುಗೆಯಿಂದ ವೇದಿಕೆಯವರೆಗೆ ಬಸವೇಶ್ವರ ಪುತ್ಥಳಿಯೊಂದಿಗೆ, ವಿವಿಧ ಕಲಾ ತಂಡಗಳ ಮೂಲಕ ಮೆರವಣಿಗೆ ಕಾರ್ಯಕ್ರಮ ವೇದಿಕೆಯ ಸಾಂಸ್ಕೃತಿಕ ಕಾರ್ಯಕ್ರಮಗಳಾಗಿ ತೋಟಪ್ಪ ಉತ್ತಂಗಿ ಮತ್ತು ಅಕ್ಕನ ಬಳಗದ ವತಿಯಿಂದ ವಚನ ಗೀತೆ, ವಚನ ನೃತ್ಯ ರೂಪಕವಾದ ತರಳಬಾಳು ಕಲಾಸಂಘದ ವತಿಯಿಂದ ಗೋವಿನ ಹಾಡು ಕಾರ್ಯಕ್ರಮವನ್ನು ಪ್ರದರ್ಶಿಸಲಾಗುತ್ತದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಚಿಕ್ಕನಾಯನಹಳ್ಳಿ ತಾಲೂಕಿನ ಉಪಾಧ್ಯಕ್ಷ ಸಿದ್ದರಾಮಯ್ಯ ಹುಳಿಯಾರು, ಕಾರ್ಯದರ್ಶಿ ಚನ್ನಬಸವಯ್ಯ, ಶಿವವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷ ಆನಂದಮೂರ್ತಿ, ತಿಪಟೂರು ತಾಲ್ಲೂಕಿನ ಸಾಧು ವೀರಶೈವ ಸಮಾಜದ ಕಾರ್ಯದರ್ಶಿ ವೀರಭದ್ರಪ್ಪಹಾಲ್ಕುರಿಕೆ, ಉಪಾಧ್ಯಕ್ಷ ಪ್ರಶಾಂತ್‌ಕರೀಕೆರೆ, ಎಚ್.ಸಿ.ಎಮ್.ಜಿ ಕಾಲೇಜಿನ ಸ್ಥಳೀಯ ಸಮಿತಿಯ ಉಪಾಧ್ಯಕ್ಷ ದಿನೇಶ್‌ಗೆದ್ದಲೇಹಳ್ಳಿ, ಸದಸ್ಯ ಲಿಂಗರಾಜು ಮತ್ತಿಹಳ್ಳಿ, ವಿಜಯಣ್ಣ ಹಳೇಪಾಳ್ಯ, ಬಳವನೇರಲು ಗ್ರಾ.ಪಂ. ಸದಸ್ಯ ಚಂದ್ರಶೇಖರ್‌ರುದ್ರಾಪುರ, ಮತ್ತಿಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಶಿವಾನಂದಮೂರ್ತಿ ಮತ್ತಿತ್ತರು ಹಾಜರಿದ್ದರು.

ವರ್ಷದೊಳಗೆ ಮಧುಗಿರಿ ಪಟ್ಟಣ ಅಭಿವೃದ್ಧಿ

ಮಧುಗಿರಿ: ಮುಂದಿನ ಒಂದು ವರ್ಷದೊಳಗೆ ಮಧುಗಿರಿ ನಗರವನ್ನು ಇಡೀ ರಾಜ್ಯವೇ ತಿರುಗಿ ನೋಡುವಂತೆ ಅಭಿವೃದ್ಧಿ ಪಡಿಸಲಾಗುವುದು ಎಂದು ವಿಧಾನ ಪರಿಷತ್ ಸದಸ್ಯ ರಾಜೇಂದ್ರ ರಾಜಣ್ಣ ಭರವಸೆ ನೀಡಿದರು.

ಪಟ್ಟಣದ ಮಹಾತ್ಮಗಾಂಧೀ(ಡೂಂ ಲೈಟ್ ವೃತ್ತ) ವೃತ್ತದಲ್ಲಿ ಶನಿವಾರ ಪುರಸಭೆ ವತಿಯಿಂದ ಅಮೃತ್ 2 ಯೋಜನೆಯಲ್ಲಿ 40 ಕೋಟಿ ವೆಚ್ಚದಲ್ಲಿ ಮನೆ ಮನೆಗೆ ಕುಡಿಯುವ ನೀರಿನ ಸಂಪರ್ಕ ಕಲ್ಪಿಸುವ ಯೋಜನೆಗೆ ಚಾಲನೆ ನೀಡಿ ಮಾತನಾಡಿದ ಅವರು ಅಮೃತ್ 2 ಯೋಜನೆ ಮನೆ ಮನೆಗೆ ನೀರು ಸರಬರಾಜು ಮಾಡುವ ಯೋಜನೆಯಾಗಿದ್ದು, ಮಧುಗಿರಿ ನಗರದಲ್ಲಿ ಸಹಕಾರ ಸಚಿವ ಕೆ.ಎನ್.ರಾಜಣ್ಣನವರ ನೇತೃತ್ವದಲ್ಲಿ ಯೋಜನೆ ಜಾರಿಗೊಳಿಸಲಾಗುತ್ತಿದ್ದು, ಆದಷ್ಟು ಬೇಗ ಕಾಮಗಾರಿ ಪೂರ್ಣಗೊಳಿಸಬೇಕು. ಈ ಯೋಜನೆಗಳಿಗೆ ರಸ್ತೆಗಳ ಪಕ್ಕದಲ್ಲಿ ಗುಂಡಿ ತೋಡಲಿದ್ದು, ಇದರಿಂದ ಸಾರ್ವಜನಿಕರಿಗೆ ತೊಂದರೆ ಯಾಗದಂತೆ ಆದಷ್ಟು ಬೇಗ ಕಾಮಗಾರಿ ಪೂರ್ಣಗೊಳಿಸಬೇಕು. 2018 ರಲ್ಲಿ 48 ಕೋಟಿ ವೆಚ್ಚದಲ್ಲಿ ರಾಜಣ್ಣನವರು ಯುಜಿಡಿ ಕಾಮಗಾರಿ ಪ್ರಾರಂಭವಾಗಿದ್ದು, ಹಿಂದಿನ ಶಾಸಕರು ಕಾಮಗಾರಿಗೆ ಆಸಕ್ತಿ ತೋರದಿರುವುದರಿಂದ ಕಾಮಗಾರಿ ಪ್ರಾರಂಭವಾಗಿ 7 ವರ್ಷ ಕಳೆದರೂ ಕಾಮಗಾರಿ ಪೂರ್ಣಗೊಂಡಿಲ್ಲ, ಯುಜಿಡಿ ಕಾಮಗಾರಿ ನಮ್ಮ ಮಧುಗಿರಿಯಲ್ಲಿ ಯಶಸ್ವಿಯಾಗಿಲ್ಲ. 1ನೇ ಬ್ಲಾಕ್ ನಿಂದ ಕಾಮಗಾರಿ ಪ್ರಾರಂಭಿಸಿ, ಗಂಡಿಗಳನ್ನು ತೋಡಿದ ನಂತರ ಮತ್ತೆ ಸಮರ್ಪಕವಾಗಿ ಗುಂಡಿಗಳನ್ನು ಮುಚ್ಚಬೇಕು. ಸದ್ಯಕ್ಕೆ 6 ಸಾವಿರ ಮನೆಗಳಿಗೆ ನೀರಿನ ಸಂಪರ್ಕ ಕಲ್ಪಿಸಬಹುದಾಗಿದ್ದು, ಯೋಜನೆ ಪೂರ್ಣಗೊಳಿಸಲು ಇನ್ನೂ 20 ಕೋಟಿ ರೂಗಳ ಅನುದಾನ ಬೇಕಾಗಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸಚಿವರ ಕೆ.ಎನ್.ರಾಜಣ್ಣನವರ ಗಮನಕ್ಕೆ ತಂದು ಅನುಧಾನ ಬಿಡುಗಡೆಗೊಳಿಸಿ ಉಳಿದ ಮನೆಗಳಿಗೂ ಸಂಪರ್ಕ ಕಲ್ಪಿಸಲು ಕೈಗೊಳ್ಳಲಾಗುವುದು ಎಂದರು. ಗೋಟೂರು ಶಿವಪ್ಪ ಇದ್ದರು.

> **ಪಟ್ಟಣದ ಅಭಿವೃದ್ಧಿಗೆ ಅಮೃತ್ 2 ಯೋಜನೆಯಲ್ಲಿ 40 ಕೋಟಿ ವೆಚ್ಚದಲ್ಲಿ ನೀರಿನ ಸಂಪರ್ಕ ಕಲ್ಪಿಸುವ ಯೋಜನೆಗೆ ಚಾಲನೆ ನೀಡಲಾಗುತ್ತಿದೆ. ಮುಂದಿನ ದಿನಗಳಲ್ಲಿ 25 ಕೋಟಿ ವೆಚ್ಚದಲ್ಲಿ ಪಟ್ಟಣದ ಪ್ರಮುಖ ರಸ್ತೆಗಳ ಅಭಿವೃದ್ಧಿಗೊಳಿಸಲು ಸಿದ್ಧತೆ ಕೈಗೊಳ್ಳಲಾಗಿದೆ.**
> ■ **ಲಾಲಾಪೇಟೆ ಮಂಜುನಾಥ್, ಪುರಸಭಾಧ್ಯಕ್ಷ**

ಎಲ್ಲಾ ವರ್ಗವೂ ಸಂವಿಧಾನ ಫಲಾನುಭವಿಗಳೇ

ಕೋಲಾರ: ದೇಶದಲ್ಲಿ ಸಂವಿಧಾನದ ಅಡಿಯಲ್ಲಿ ದಲಿತರಿಗೆ ಮಾತ್ರ ಮೀಸಲಾತಿ ಇದೆ ಎನ್ನುವ ತಪ್ಪುಕಲ್ಪನೆ ಹಾಗೂ ಅಪಪ್ರಚಾರವು ಸಾಮಾನ್ಯ ಜನರಲ್ಲಿದ್ದು, ಎಲ್ಲಾ ವರ್ಗದ ಜನರಿಗೂ ಸಂವಿಧಾನ ಮೂಲಕ ಮೀಸಲಾತಿ ಕಲ್ಪಿಸಿದೆ ಎಂಬುವುದನ್ನು ಮರೆಯಬಾರದು ಎಂದು ವಿಧಾನ ಪರಿಷತ್ ಸದಸ್ಯ ಎಂ.ಎಲ್ ಅನಿಲ್‌ಕುಮಾರ್ ತಿಳಿಸಿದರು

ತಾಲೂಕಿನ ಚಿನ್ನಾಪುರ ಗ್ರಾಮದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಯುವಕರ ಸಂಘದ ವತಿಯಿಂದ ವಿಶ್ವಜ್ಞಾನಿ ಅಂಬೇಡ್ಕರ್ ಅವರ 134ನೇ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದರು. ಭಾರತದ ಸಂವಿಧಾನವು ಜಗತ್ತಿನಲ್ಲೇ ಅತ್ಯತ್ತಮ ಶ್ರೇಷ್ಠ ಸಂವಿಧಾನವಾಗಿದ್ದು, ಅಂಬೇಡ್ಕರ್ ಅವರು 2 ವರ್ಷ 11 ತಿಂಗಳು 17 ದಿನಗಳ ಕಾಲ ಪ್ರಪಂಚದ ಎಲ್ಲ ಸಂವಿಧಾನಗಳನ್ನು ಅಧ್ಯಯನ ಮಾಡಿ, ಅದರಲ್ಲಿ ಅತ್ಯುತ್ತಮ ಅಂಶಗಳನ್ನು ತೆಗದುಕೊಂಡು, ಲಿಖಿತ ಸಂವ